

'ನಿಮ್ಮ ಲೇಖನಿ ಇಂಥ ಮಂಗಗಳ ವಿರುದ್ಧ ಪೂರ್ಣಶಕ್ತಿಯೊಂದಿಗೆ ಹೋರಾಡುತ್ತಿದೆ ಅನ್ನೋದು ನನಗೆ ಗೊತ್ತಿದೆ.' ಎಂದ ಚಿತ್ರಕಾರ. 'ಅದ್ಸರಿ, ನೀವು ನವಿಲಿನ ಚಿತ್ರವನ್ನೇ ಏಕೆ ಇಷ್ಟಪಡ್ತೀರಾ?' ಚಿತ್ರಕಾರ ಮತ್ತೆ ಪ್ರಶ್ನಿಸಿದ.

'ಏಕೆಂದರೆ ನಾನು ಸಾಹಿತ್ಯವನ್ನು ನವಿಲೆಂದು ತಿಳಿಯುತ್ತೇನೆ. ನವಿಲು ತನ್ನ ಬಣ್ಣಬಣ್ಣದ ರೆಕ್ಕೆಗಳನ್ನು ಹರಡಿ ಅದೆಷ್ಟು ಸುಂದರ ನೃತ್ಯವನ್ನು ಮಾಡುತ್ತದೆ!... ನವಿಲು ನೃತ್ಯವನ್ನಷ್ಟೇ ಮಾಡುವುದಿಲ್ಲ, ಹಾವುಗಳನ್ನು ಸಹ ಸ್ವಾಹಾ ಮಾಡುತ್ತವೆ ಎಂಬುವುದು ನಿಮಗೆ ಗೊತ್ತಿದೆ.' 'ಒಂದ್ ಮಾತು ಹೇಳ್ಲಾ, ನೀವು ಅನ್ಯಥಾ ಭಾವಿಸುವುದಿಲ್ಲ ತಾನೇ?' ಚಿತ್ರಕಾರ ಹೇಳಿದ, 'ಇಂದಿನ ಸಾಹಿತ್ಯ ಯಥಾರ್ಥದ ಹೆಸರಿನಲ್ಲಿ... ಹಾವುಗಳನ್ನು ಸ್ವಾಹಾ ಮಾಡುವ ಹೆಸರಿನಲ್ಲಿ ದೊಣ್ಣೆಯನ್ನಷ್ಟೇ ಕುಣಿಸುತ್ತದೆ.'

'ನೀವು ನಿಜವನ್ನೇ ಹೇಳ್ತಿದ್ದೀರ' ಮಿಲ್ಲರ್ ಹೇಳಿದರು, 'ದೊಣ್ಣೆ...ವಾದ, ಅದು ಜನರೊಂದಿಗೆ ಎಷ್ಟೇ ಕಲೆತಿದ್ದಾಗ್ಯೂ ಸಾಹಿತ್ಯವಲ್ಲ, ವೈದ್ಯಕೀಯ ಎಕ್ಸ್-ರೇ ಮಾತ್ರ.'

'ನೀವು ಏನು ತಗೊಳ್ತೀರ, ಚಹಾ ಅಥವಾ ಕಾಫಿ?'

'ಏನಾದ್ರು ಆಗುತ್ತೆ. ಆದ್ರೆ ಬಿಸಿ ಇರಲಿ, ಇವತ್ತಿನ ನಿಜವಾದ ಸಾಹಿತ್ಯದಂತೆ.'

ಚಿತ್ರಕಾರ, ಮಿಲ್ಲರ್‌ಗೆ ನವಿಲಿನ ಚಿತ್ರವನ್ನು ಬರೆದು ಕೊಟ್ಟ.

ಆರ್ಥರ್ ಮಿಲ್ಲರ್ ತುಂಬಾ ಖುಷಿಯಿಂದ ಅಲ್ಲಿಂದ ಹೊರಟು ಹೋದರು.

ಚಿತ್ರಕಾರ ಚಿತ್ರ ಬರೆಯುತ್ತಿದ್ದ. ಆದರೆ ಅವನ ಕಣ್ಣುಗಳೆದುರು ಮಸುಕು ಇದ್ದಿದ್ದರಿಂದ ಯಾವುದೇ ಸ್ಪಷ್ಟ ಚಿತ್ರ ಅವನ ದೃಷ್ಟಿಯಲ್ಲಿರಲಿಲ್ಲ. ಹೊಟ್ಟೆ ತೀವ್ರವಾಗಿ ಹಸಿದಿತ್ತು. ಊಟಕ್ಕಾಗಿ ಹೆಂಡತಿಯನ್ನು ಎರಡು ಬಾರಿ ಕರೆದು ನೆನಪಿಸಿದ್ದ.

ಮೂರನೆಯ ಬಾರಿ ನೆನಪಿಸಿದಾಗ ಹೆಂಡತಿ ಒಳಗಿನಿಂದಲೇ ಹೇಳಿದಳು, 'ಊಟ ಎಲ್ಲಿಂದ ತರ್ಲಿ? ಬೇಯಿಸಲು ಮನೇಲಿ ಏನೂ ಇಲ್ಲ. ನೀವು ಪಾರಿವಾಳ, ಕೋಗಿಲೆ, ಹಂಸ, ನವಿಲುಗಳಲ್ಲಿ ಮುಳುಗಿರುವಾಗ ಊಟ ಎಲ್ಲಿಂದ ಬರುತ್ತೆ?'

ಆಗಲೇ ಬಾಗಿಲನ್ನು ತಟ್ಟಿದ ಸದ್ದಾಯಿತು.

ಬಾಗಿಲು ತೆರೆದಾಗ ಚಿತ್ರಕಾರ ನೋಡಿದ; ಎದುರಿಗೆ ತೋಳ ನಿಂತಿದೆ!

'ನೋಡು, ನೀನು ನನಗೊಂದು ಚಿತ್ರ ಬರೆದು ಕೊಡು. ಕುರಿಯ ಚಿತ್ರ.'

'ನಾನು ಬರಿಯಲ್ಲ.' ಚಿತ್ರಕಾರ ಹೇಳಿದ, 'ನೀನು ಕುರಿಯನ್ನು ತಿನ್ನುವವನು! ನಿನಗೆ ಕುರಿಯ ಚಿತ್ರ ಏಕೆ ಬೇಕು ಅಂತ ನನಗೆ ಗೊತ್ತಿದೆ. ಕುರಿಯ ಬಗ್ಗೆ ಪ್ರೀತಿಯನ್ನು ತೋರಿಸುವುದಕ್ಕಾಗಿ ನಿನಗೆ ಕುರಿಯ ಚಿತ್ರ ಬೇಕಿದೆ.'

'ನಾನು ನಿನಗೆ ಯಾರೂ ಕೊಡದಷ್ಟು ಹಣ ಕೊಡ್ತೀನಿ' ತೋಳ ಹೇಳಿತು.

'ಇಲ್ಲ, ನಾನು ಮಾರಾಟಕ್ಕಿಲ್ಲ.'

ಇಷ್ಟು ಹೇಳಿ ಚಿತ್ರಕಾರ ಬಾಗಿಲನ್ನು ಮುಚ್ಚಿ ತನ್ನ ಜಾಗಕ್ಕೆ ಬಂದ.

ಆಗಲೇ ಹೆಂಡತಿ ಹೇಳಿದಳು, 'ನೀವು ಇದೇನು ಮಾಡಿದಿರಿ! ಅನ್ನ ಬಾಗಿಲಿಗೆ ಬಂದಿತ್ತು, ನೀವು ಅದನ್ನು ತಿರಸ್ಕರಿಸಿದಿರಿ.'

ಅತ್ತ ಹೆಂಡತಿ ಹೇಳಿದಳು, ಇತ್ತ ಅವನ ಹೊಟ್ಟೆಯ ಹಸಿವು ಗಟ್ಟಿಯಾಗಿ ಕಿರುಚಿತು- 'ಇಲ್ಲ, ನಾನು ಮರಾಟಕ್ಕಿಲ್ಲ' ಚಿತ್ರಕಾರ ಎದ್ದು ಬಾಗಿಲೆಡೆಗೆ ಓಡಿದ. ●